## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2250. |
| ಸದಸ್ಯರು ಹೆಸರು | : | ಶ್ರೀ. ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು). |
| ಉತ್ತರಿಸಬೇಕಾದ ದಿನಾಂಕ | : | 26.03.2026. |
| ಉತ್ತರಿಸುವ ಸಚಿವರು | : | ಗೃಹ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಇತ್ತೀಚಿನ ದಿನಗಳಲ್ಲಿ ಅಪ್ರಾಪ್ತರು ವಾಹನ ಚಾಲನೆ ಮಾಡುವ ಪ್ರಕರಣಗಳ ಜೊತೆಗೆ ವಾಹನಗಳ ವ್ಹೀಲಿಂಗ್ ಪ್ರಕರಣಗಳು ಹೆಚ್ಚುತ್ತಿದ್ದು, ಸಾರ್ವಜನಿಕರ ಸುರಕ್ಷತೆಗೆ ಅಪಾಯಕಾರಿ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| (ಆ) | ಬಂದಿದ್ದಲ್ಲಿ, ಇಂತಹ ಕಾನೂನುಬಾಹಿರ, ದಂಡನೀಯ ಅಪರಾಧ ಪ್ರಕರಣಗಳನ್ನು ತಡೆಯಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; ಈ ಬಗ್ಗೆ ಕಾನೂನು ಏನು ಹೇಳುತ್ತದೆ;(ಸಂಪೂರ್ಣ ವಿವರ ನೀಡುವುದು) | ➢ ಅಪ್ರಾಪ್ತರ ವಾಹನ ಚಾಲನೆಯನ್ನು ತಡೆಗಟ್ಟಲು ವಾಹನ ಚಲಾಯಿಸುವ ಅಪ್ರಾಪ್ತರ ವಿರುದ್ಧ ಬಿ.ಎನ್.ಎಸ್ ಹಾಗೂ ಐ.ಎಂ.ವಿ. ಕಾಯ್ದೆ ರೀತ್ಯಾ ಪ್ರಕರಣಗಳನ್ನು ದಾಖಲು ಮಾಡಿ, ಸವಾರರುಗಳನ್ನು ದಸ್ತಗಿರಿ ಮಾಡಿ ಚಾಲನೆಯಲ್ಲಿ ಭಾಗಿಯಾದ ವಾಹನಗಳನ್ನು ಅಮಾನತ್ತುಗೊಳಿಸಲಾಗುತ್ತಿದೆ.<br><br>➢ ಅಪ್ರಾಪ್ತರುಗಳ ವಿರುದ್ಧ ಪ್ರಕರಣಗಳನ್ನು ದಾಖಲು ಮಾಡುವುದರ ಜೊತೆಗೆ ಅವರ ಪೋಷಕರುಗಳ ವಿರುದ್ಧವೂ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುತ್ತಿದೆ.<br><br>➢ ಅಪ್ರಾಪ್ತರು ವಾಹನ ಚಾಲನೆಯಲ್ಲಿ ಭಾಗಿಯಾಗುವ ವಾಹನಗಳ ನೋಂದಣಿ ಪುಸ್ತಕಗಳನ್ನು ರದ್ದುಪಡಿಸಲು ಸಂಬಂಧಪಟ್ಟ ಆರ್.ಟಿ.ಓ. ಕಛೇರಿಗೆ ಶಿಫಾರಸ್ಸುಗಳನ್ನು ಕಳುಹಿಸಲಾಗುತ್ತಿದೆ.<br><br>➢ ಅಪ್ರಾಪ್ತ ವಯಸ್ಕರ ಚಾಲನೆಯನ್ನು ತಡೆಗಟ್ಟುವ ಸಲುವಾಗಿ ಕಾಲಕಾಲಕ್ಕೆ ವಿಶೇಷ ಕಾರ್ಯಾಚರಣೆಯನ್ನು ಹಮ್ಮಿಕೊಳ್ಳಲಾಗುತ್ತಿದೆ ಹಾಗೂ ಪ್ರತೀ ವರ್ಷ ಜನವರಿ ತಿಂಗಳಿನಲ್ಲಿ ರಸ್ತೆ ಸುರಕ್ಷತಾ ಮಾಸಾಚರಣೆಯಲ್ಲಿಯೂ ಸಾರ್ವಜನಿಕರಿಗೆ ಅರಿವು ಮೂಡಿಸುವಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.<br><br>➢ ಅಪ್ರಾಪ್ತರು ಹೆಚ್ಚಾಗಿ ವ್ಹೀಲಿಂಗ್‌ನಲ್ಲಿ ಭಾಗಿಯಾಗುತ್ತಿದ್ದು, ಇದನ್ನು ತಡೆಗಟ್ಟುವ ಸಲುವಾಗಿ ನಿಯಮಿತವಾಗಿ ವ್ಹೀಲಿಂಗ್ ನಡೆಸುವಂತಹ ಸ್ಥಳಗಳನ್ನು ಗುರುತಿಸಿ, ಸದರಿ ಸ್ಥಳಗಳಲ್ಲಿ ಅಗತ್ಯ ಸಂಚಾರಿ ಪೊಲೀಸ್ ಸಿಬ್ಬಂದಿಗಳನ್ನು ಗಸ್ತು ಕರ್ತವ್ಯಕ್ಕೆ ನೇಮಿಸುವ ಮೂಲಕ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತಿದೆ.<br><br>➢ ವ್ಹೀಲಿಂಗ್‌ನಲ್ಲಿ ಭಾಗಿಯಾಗುವ ಅಪ್ರಾಪ್ತ ಸವಾರರುಗಳ ವಿರುದ್ಧ ಕಲಂ 107 ಸಿ.ಆರ್.ಪಿ.ಸಿ. ರೀತ್ಯಾ ಸಂಬಂಧಪಟ್ಟ ವಿಶೇಷ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ರವರ(ಕಾನೂನು ಸುವ್ಯವಸ್ಥೆ ವಿಭಾಗದ ಉಪ ಪೊಲೀಸ್ ಆಯುಕ್ತರ) ಮುಂದೆ ಪಿ.ಎ.ಆರ್. ದಾಖಲಿಸಲಾಗುತ್ತಿದೆ.<br><br>➢ ಬೆಂಗಳೂರು ನಗರದಲ್ಲಿ ನಿಯಮಿತವಾಗಿ ವ್ಹೀಲಿಂಗ್ ಸಂಭವಿಸುವಂತಹ ಒಟ್ಟು 37 ಸ್ಥಳ/ರಸ್ತೆಗಳನ್ನು ಗುರುತಿಸಲಾಗಿದ್ದು, ಸದರಿ ರಸ್ತೆಗಳಲ್ಲಿ ಗಸ್ತು ಕರ್ತವ್ಯಕ್ಕೆ ಕೋಬ್ರಾ ಸಿಬ್ಬಂದಿಗಳನ್ನು ನೇಮಕ ಮಾಡಲಾಗಿದೆ. |

| | | |
|---|---|---|
| | | ➢ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್ ಹಾಗೂ ಎಕ್ಸ್‌ನಲ್ಲಿ ಸವಾರರಿಗೆ ಅರಿವು ಮೂಡಿಸುವ ಕಾರ್ಯವನ್ನುಕೈಗೊಂಡಿದೆ.<br>➢ ಎಸ್.ಎ.ಆರ್.ಎಸ್ ಯೋಜನೆಯಡಿಯಲ್ಲಿ ಶಾಲೆಗಳಿಗೆ ಖುದ್ದು ಭೇಟಿ ಕೊಟ್ಟು ರಸ್ತೆ ಸುರಕ್ಷತೆಯ ಬಗ್ಗೆ ಅರಿವು ಮೂಡಿಸುವ ಸಮಯದಲ್ಲಿ ವ್ಹೀಲಿಂಗ್ ಮಾಡುವುದರಿಂದ ಆಗುವ ಅನಾಹುತಗಳ ಬಗ್ಗೆ ತಿಳುವಳಿಕೆ ನೀಡಲಾಗುತ್ತಿದೆ.<br><br>**ಕಲಂ 199 ಎ, ಐ.ಎಂ.ವಿ. ಕಾಯ್ದೆ(2019ರಲ್ಲಿ ತಿದ್ದುಪಡಿ ಮಾಡಲಾಗಿದೆ)**<br>(1) ಈ ಕಾಯಿದೆಯಡಿಯಲ್ಲಿನ ಅಪರಾಧವು ಒಬ್ಬ ಅಪ್ರಾಪ್ತ ವಯಸ್ಕನಿಂದ ಎಸಗಲ್ಪಟ್ಟಿದ್ದರೆ, ಅಂತಹ ಅಪ್ರಾಪ್ತನ ಪೋಷಕರು ಅಥವಾ ಮೋಟಾರು ವಾಹನದ ಮಾಲೀಕರು ಆ ಉಲ್ಲಂಘನೆಗೆ ತಪ್ಪಿತಸ್ಥರೆಂದು ಪರಿಗಣಿಸಲ್ಪಡಬೇಕು ಮತ್ತು ಅವರ ವಿರುದ್ಧ ಕ್ರಮ ಜರುಗಿಸಲು ಹಾಗೂ ತಕ್ಕಂತೆ ಶಿಕ್ಷಿಸಲು ಅವರು ಹೊಣೆಗಾರರಾಗಿರುತ್ತಾರೆ.<br>(2) ಉಪ-ವಿಭಾಗ (1) ರ ಅಡಿಯಲ್ಲಿನ ದಂಡನೆಯ ಜೊತೆಗೆ, ಅಂತಹ ಪೋಷಕರು ಅಥವಾ ಮಾಲೀಕರು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು ಇಪ್ಪತ್ತೈದು ಸಾವಿರ ರೂಪಾಯಿಗಳ ದಂಡಕ್ಕೆ ಗುರಿಯಾಗುತ್ತಾರೆ.<br>ಬೆಂಗಳೂರು ಸಂಚಾರ ವಿಭಾಗದಲ್ಲಿ ಮೇಲ್ಕಂಡ ಕಲಂನೊಂದಿಗೆ ಕಲಂ 281 ಬಿ.ಎನ್.ಎಸ್ ಕಾಯ್ದೆ ರೀತ್ಯಾದಲ್ಲೂ ಪ್ರಕರಣವನ್ನು ದಾಖಲು ಮಾಡಲಾಗುತ್ತಿದೆ. |
| (ಇ) | ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಅಪ್ರಾಪ್ತರು ವಾಹನ ಚಾಲನೆ ಮಾಡಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ದಾಖಲಿಸಿರುವ ಪ್ರಕರಣಗಳ ಸಂಖ್ಯೆ ಎಷ್ಟು; (ಜಿಲ್ಲೆ, ವರ್ಷ, ದಾಖಲಾದ ಪ್ರಕರಣಗಳ ಸಂಖ್ಯೆ, ಪೋಷಕರು/ಮಾಲೀಕರ ವಿರುದ್ಧ ಕ್ರಮ ಜರುಗಿಸಿದ ಪ್ರಕರಣಗಳ ಸಂಖ್ಯೆ ಹಾಗೂ ಸಂಗ್ರಹಿಸಿದ ದಂಡ ಮೊತ್ತದೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು); | ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಅಪ್ರಾಪ್ತರು ವಾಹನ ಚಾಲನೆ ಮಾಡಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ದಾಖಲಿಸಿರುವ ಪ್ರಕರಣಗಳ ಸಂಖ್ಯೆಗಳ ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಸಿದೆ. |
| (ಈ) | ಮೇಲ್ಕಂಡ ಅವಧಿಯಲ್ಲಿ ವ್ಹೀಲಿಂಗ್ ಪ್ರಕರಣಗಳ ಸಂಬಂಧ ದಾಖಲಾಗಿರುವ ದೂರು ಪ್ರಕರಣಗಳ ಸಂಖ್ಯೆ ಎಷ್ಟು; (ಜಿಲ್ಲೆ, ವರ್ಷ, ದಾಖಲಾದ ಪ್ರಕರಣಗಳ ಸಂಖ್ಯೆ, ಪೋಷಕರು/ಮಾಲೀಕರ | ವ್ಹೀಲಿಂಗ್ ಪ್ರಕರಣಗಳ ಸಂಬಂಧ ದಾಖಲಾಗಿರುವ ದೂರು ಪ್ರಕರಣಗಳ ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಿದೆ. |

<table>
<tr><td></td><td>ವಿರುದ್ಧ ಕ್ರಮ ಜರುಗಿಸಿದ ಪ್ರಕರಣಗಳ ಸಂಖ್ಯೆ ಹಾಗೂ ಸಂಗ್ರಹಿಸಿದ ದಂಡ ಮೊತ್ತದೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)</td><td></td></tr>
<tr><td>(ಉ)</td><td>ಸದರಿ ಅವಧಿಯಲ್ಲಿ ಅಪ್ರಾಪ್ತರ ವಾಹನ ಚಾಲನೆ ಮತ್ತು ವ್ಹೀಲಿಂಗ್ ಪ್ರಕರಣಗಳಿಂದಾಗಿ ಉಂಟಾಗಿರುವ ಜೀವ ಹಾನಿ ಪ್ರಕರಣಗಳ ಸಂಖ್ಯೆ ಎಷ್ಟು;</td><td>
<table>
<tr><th colspan="3">ಅಪ್ರಾಪ್ತರ ವಾಹನ ಚಾಲನೆಯಿಂದ ದಾಖಲಾದ ಜೀವಹಾನಿ ಪ್ರಕರಣಗಳ ಸಂಖ್ಯೆ</th><th colspan="3">ವ್ಹೀಲಿಂಗ್‌ನಿಂದಾಗಿ ಉಂಟಾಗಿರುವ ಜೀವಹಾನಿ ಪ್ರಕರಣಗಳ ಸಂಖ್ಯೆ</th></tr>
<tr><th>2023</th><th>2024</th><th>2025</th><th>2023</th><th>2024</th><th>2025</th></tr>
<tr><td>58</td><td>70</td><td>61</td><td>04</td><td>15</td><td>08</td></tr>
</table>
</td></tr>
<tr><td>(ಊ)</td><td>ಶಾಲಾ-ಕಾಲೇಜುಗಳಲ್ಲಿ ಸಂಚಾರಿ ನಿಯಮಗಳ ಬಗ್ಗೆ ಜಾಗೃತಿ ಮೂಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಏನು ?</td><td>
➢ ಸಂಚಾರ ಪಾರ್ಕ್, ಸಂಚಾರ ತರಬೇತಿ ಮತ್ತು ರಸ್ತೆ ಸುರಕ್ಷತಾ ಸಂಸ್ಥೆ ಹಾಗೂ ಸಂಚಾರ ನಿರ್ವಹಣಾ ಕೇಂದ್ರಕ್ಕೂ ಸಹ ಭೇಟಿ ನೀಡುವ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಅಪ್ರಾಪ್ತ ಚಾಲನೆಯಿಂದ ಉಂಟಾಗುವ ತೊಂದರೆಗಳ ಬಗ್ಗೆ ಅರಿವು ಮೂಡಿಸುವ ಕಾರ್ಯವನ್ನು ಮಾಡಲಾಗುತ್ತಿದೆ.<br><br>
➢ ಕಳೆದ ಮೂರು ವರ್ಷಗಳಲ್ಲಿ ಟಿ.ಟಿ.ಆರ್.ಎಸ್.ಐ ಸಂಸ್ಥೆಯಲ್ಲಿ ಕ್ರಮವಾಗಿ 17481, 30019 ಹಾಗೂ 31337 ಶಾಲಾ ವಿದ್ಯಾರ್ಥಿಗಳಿಗೆ ಸಂಚಾರ ನಿಯಮಗಳ ಬಗ್ಗೆ ಅರಿವು ಮೂಡಿಸುವ ಕಾರ್ಯವನ್ನು ಕೈಗೊಂಡಿದೆ.<br><br>
➢ ಎಸ್.ಎ.ಆರ್.ಎಸ್ ಯೋಜನೆಯಡಿಯಲ್ಲಿ ರಸ್ತೆ ಸುರಕ್ಷತೆಯ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಪ್ರತ್ಯೇಕ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ನೇಮಿಸಿ ಖುದ್ದು ಶಾಲಾ ಕಾಲೇಜುಗಳಿಗೆ ಭೇಟಿ ಕೊಟ್ಟು ಸಂಚಾರ ನಿಯಮಗಳ ಬಗ್ಗೆ ಅರಿವು ಮೂಡಿಸಲು ಕ್ರಮ ಕೈಗೊಂಡಿದೆ.<br><br>
➢ ಶಾಲಾ ಮಕ್ಕಳಿಗೆ ರಸ್ತೆ ಸುರಕ್ಷತೆ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಪ್ರತಿ ಮಾಹೆಯ 1ನೇ ಶನಿವಾರದಂದು ಸಂಚಾರ ಸುರಕ್ಷತಾ ದಿನವೆಂದು ಹಾಗೂ 3ನೇ ಶನಿವಾರವನ್ನು ಸಂಭ್ರಮ ಶನಿವಾರ ದಿನವೆಂದು ನಿಗದಿಪಡಿಸಿ ಕಡ್ಡಾಯವಾಗಿ ರಸ್ತೆ ಸುರಕ್ಷತಾ ತರಬೇತಿಯನ್ನು ಆಯೋಜಿಸಲಾಗುತ್ತಿದೆ.
</td></tr>
</table>

ಹೆಚ್‌ಡಿ 181 ಎಸ್‌ಎಸ್‌ಟಿ 2026

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು.

ಅನುಬಂಧ

ಅನುಬಂಧ-1 (2)

| ಕ್ರ. ಸಂ | ಘಟಕಗಳ ಹೆಸರು | 2023 | | | 2024 | | | 2025 | | |
|---|---|---|---|---|---|---|---|---|---|---|
| | | ಅಪ್ರಾಪ್ತರ ವಿರುದ್ಧ ದಾಖಲಾಗಿರುವ ಪ್ರಕರಣಗಳ ಸಂಖ್ಯೆ | ಪೋಷಕರ ವಿರುದ್ಧ ದಾಖಲಿಸಿರುವ ಪ್ರಕರಣಗಳ ಸಂಖ್ಯೆ | ಸಂಗ್ರಹಿಸಿದ ದಂಡ ಮೊತ್ತ | ಅಪ್ರಾಪ್ತರ ವಿರುದ್ಧ ದಾಖಲಾಗಿರುವ ಪ್ರಕರಣಗಳ ಸಂಖ್ಯೆ | ಪೋಷಕರ ವಿರುದ್ಧ ದಾಖಲಿಸಿರುವ ಪ್ರಕರಣಗಳ ಸಂಖ್ಯೆ | ಸಂಗ್ರಹಿಸಿದ ದಂಡ ಮೊತ್ತ | ಅಪ್ರಾಪ್ತರ ವಿರುದ್ಧ ದಾಖಲಾಗಿರುವ ಪ್ರಕರಣಗಳ ಸಂಖ್ಯೆ | ಪೋಷಕರ ವಿರುದ್ಧ ದಾಖಲಿಸಿರುವ ಪ್ರಕರಣಗಳ ಸಂಖ್ಯೆ | ಸಂಗ್ರಹಿಸಿದ ದಂಡ ಮೊತ್ತ |
| 1 | Bangalore City | 240 | 240 | 1831500 | 378 | 378 | 1699050 | 632 | 632 | 1565370 |
| 2 | Mysore City | 21 | 15 | 1355000 | 27 | 33 | 121000 | 19 | 34 | 137000 |
| 3 | Hubli Dharwad City | 6 | 0 | 52000 | 35 | 0 | 559500 | 2 | - | 50000 |
| 4 | Mangalore City | 2 | 2 | 2000 | 6 | 8 | 161500 | 15 | 25 | 205000 |
| 5 | Belagavi City | 0 | 0 | 0 | 0 | 2 | 50000 | 0 | 10 | 252000 |
| 6 | Kalaburagi City | 0 | 0 | 0 | 0 | 0 | 0 | 0 | 0 | 0 |
| 7 | Bengaluru Dist. | 1 | 1 | 0 | 14 | 13 | 0 | 0 | 9 | 0 |
| 8 | Kolar Dist. | 0 | 0 | 0 | 4 | 3 | 68500 | 9 | 0 | 11500 |
| 9 | K.G.F | 3 | 3 | 27000 | 3 | 3 | 1500 | 2 | 2 | 500021 |
| 10 | Tumkur Dist. | 21 | 8 | 78000 | 35 | 13 | 95500 | 2 | 6 | 150000 |
| 11 | Ramanagara Dist. | 0 | 4 | 0 | 7 | 7 | 0 | 21 | 8 | 0 |
| 12 | Chikkaballapura | 1 | 2 | 0 | 3 | 1 | 0 | 8 | 4 | 12000 |
| 13 | Mysore Dist. | 5 | 5 | 6000 | 2 | 2 | 3000 | 4 | 3 | 7400 |
| 14 | Mandya Dist. | 0 | 0 | 0 | 4 | 3 | 78500 | 3 | 1 | 12500 |
| 15 | Hassan Dist. | 5 | 5 | 21000 | 2 | 2 | 0 | 3 | 6 | 52000 |
| 16 | C.Nagar Dist. | 6 | 6 | 70400 | 26 | 26 | 424100 | 6 | 9 | 58500 |
| 17 | Kodagu Dist | 1 | 1 | 26500 | 13 | 13 | 204500 | 9 | 47 | 879500 |
| 18 | D.K Dist. | 2 | 2 | 25000 | 11 | 3 | 80000 | 47 | 7 | 142000 |
| 19 | U.K Dist. | 4 | 4 | 70700 | 7 | 5 | 143000 | 8 | 4 | 20000 |
| 20 | Chikamagalur Dist. | 0 | 0 | 0 | 16 | 8 | 66500 | 4 | 12 | 196000 |
| 21 | Udupi Dist. | 0 | 0 | 0 | 0 | 0 | 0 | 12 | 0 | 0 |
| 22 | Davanagere Dist. | 4 | 4 | 10000 | 2 | 2 | 75000 | 0 | 38 | 952000 |
| 23 | Chitradurga Dist. | 6 | 0 | 37500 | 15 | 15 | 36000 | 38 | 24 | 60000 |
| 24 | Shimoga Dist. | 7 | 7 | 65000 | 6 | 6 | 132500 | 24 | 14 | 253000 |
| 25 | Haveri Dist. | 3 | 3 | 19300 | 12 | 12 | 126300 | 14 | 3 | 7000 |
| 26 | Belgaum Dist. | 0 | 0 | 0 | 0 | 0 | 0 | 3 | 0 | 0 |
| 27 | Dharwad Dist. | 1 | 1 | 0 | 5 | 5 | 27000 | 0 | 4 | 0 |
| 28 | Vijayapura Dist. | 0 | 0 | 0 | 0 | 0 | 0 | 4 | 0 | 0 |
| 29 | Bagalkot Dist. | 16 | 4 | 31750 | 15 | 2 | 27000 | 0 | 1 | 2000 |
| 30 | Gadag Dist. | 2 | 2 | 7000 | 8 | 8 | 35000 | 7 | 3 | 50000 |
| 31 | Bidar Dist. | 0 | 0 | 0 | 1 | 1 | 25000 | 3 | 0 | 0 |
| 32 | Gulbarga Dist. | 0 | 0 | 0 | 4 | 2 | 5000 | 0 | 3 | 151000 |
| 33 | Yadgir Dist. | 2 | 2 | 26500 | 1 | 1 | 1000 | 9 | 2 | 7000 |
| 34 | Raichur Dist. | 1 | 1 | 0 | 3 | 3 | 0 | 2 | 2 | 0 |
| 35 | Koppal Dist. | 0 | 0 | 0 | 4 | 0 | 8000 | 3 | 1 | 50500 |
| 36 | Bellary Dist. | 0 | 0 | 0 | 3 | 0 | 15000 | 24 | 0 | 0 |
| 37 | Vijayanagar Dist. | 0 | 0 | 0 | 0 | 0 | 0 | 0 | 0 | 0 |
| | **Total** | **369** | **327** | **3841650** | **677** | **585** | **4338450** | **943** | **920** | **6081** |

ಅನುಬಂಧ

ಅನುಬಂಧ-2

| ಕ್ರ. ಸಂ | ಘಟಕಗಳ ಹೆಸರು | 2023 | | | 2024 | | | 2025 | | |
|---|---|---|---|---|---|---|---|---|---|---|
| | | ವ್ಹೀಲಿಂಗ್ ಪ್ರಕರಣಗಳ ಸಂಬಂಧ ದಾಖಲಾಗಿರುವ ಪ್ರಕರಣಗಳು | ಪೋಷಕರು/ಮಾಲೀಕರ ವಿರುದ್ಧ ದಾಖಲಿಸಿರುವ ಪ್ರಕರಣಗಳ ಸಂಖ್ಯೆ | ಸಂಗ್ರಹಿಸಿದ ದಂಡ ಮೊತ್ತ | ವ್ಹೀಲಿಂಗ್ ಪ್ರಕರಣಗಳ ಸಂಬಂಧ ದಾಖಲಾಗಿರುವ ಪ್ರಕರಣಗಳು ಎಷ್ಟು | ಪೋಷಕರು/ಮಾಲೀಕರ ವಿರುದ್ಧ ದಾಖಲಿಸಿರುವ ಪ್ರಕರಣಗಳ ಸಂಖ್ಯೆ | ಸಂಗ್ರಹಿಸಿದ ದಂಡ ಮೊತ್ತ | ವ್ಹೀಲಿಂಗ್ ಪ್ರಕರಣಗಳ ಸಂಬಂಧ ದಾಖಲಾಗಿರುವ ಪ್ರಕರಣಗಳು ಎಷ್ಟು | ಪೋಷಕರು/ಮಾಲೀಕರ ವಿರುದ್ಧ ದಾಖಲಿಸಿರುವ ಪ್ರಕರಣಗಳ ಸಂಖ್ಯೆ | ಸಂಗ್ರಹಿಸಿದ ದಂಡ ಮೊತ್ತ |
| 1 | Bangalore City | 242 | 70 | 2384400 | 532 | 120 | 4582750 | 646 | 159 | 9117200 |
| 2 | Mysore City | 26 | 14 | 119500 | 31 | 20 | 195300 | 48 | 42 | 119500 |
| 3 | Hublli Dharwad City | 2 | 0 | 36000 | 4 | 0 | 20500 | 2 | 0 | 10500 |
| 4 | Mangalore City | 0 | 0 | 0 | 1 | 0 | 5000 | 1 | 0 | 0 |
| 5 | Belagavi City | 0 | 0 | 0 | 0 | 0 | 0 | 0 | 0 | 3500 |
| 6 | Kalaburagi City | 0 | 0 | 0 | 0 | 0 | 0 | 0 | 0 | 0 |
| 7 | Bengaluru Dist. | 0 | 0 | 0 | 21 | 4 | 0 | 8 | 0 | 0 |
| 8 | Kolar Dist. | 2 | 0 | 84000 | 27 | 1 | 88900 | 19 | 6 | 156100 |
| 9 | K.G.F | 0 | 0 | 0 | 0 | 0 | 0 | 0 | 0 | 0 |
| 10 | Tumkur Dist. | 3 | 4 | 0 | 9 | 9 | 0 | 8 | 0 | 0 |
| 11 | Ramanagara Dist. | 10 | 4 | 2700 | 24 | 7 | 98550 | 12 | 8 | 15000 |
| 12 | Chikkaballapura | 1 | 0 | 7500 | 4 | 0 | 5500 | 1 | 1 | 0 |
| 13 | Mysore Dist. | 0 | 0 | 0 | 1 | 0 | 3000 | 0 | 0 | 0 |
| 14 | Mandya Dist. | 5 | 3 | 29000 | 3 | 3 | 42000 | 3 | 1 | 6000 |
| 15 | Hassan Dist. | 2 | 0 | 0 | 1 | 0 | 0 | 1 | 0 | 0 |
| 16 | C.Nagar Dist. | 3 | 0 | 25700 | 5 | 2 | 18850 | 4 | 0 | 0 |
| 17 | Kodagu Dist | 0 | 0 | 0 | 0 | 0 | 0 | 3 | 0 | 12500 |
| 18 | D.K Dist. | 0 | 0 | 0 | 0 | 0 | 0 | 0 | 0 | 0 |
| 19 | U.K Dist. | 3 | 0 | 6500 | 2 | 2 | 24700 | 0 | 0 | 0 |
| 20 | Chikamagalur Dist. | 1 | 0 | 4000 | 17 | 3 | 49600 | 10 | 2 | 30400 |
| 21 | Udupi Dist. | 0 | 0 | 0 | 0 | 0 | 0 | 0 | 0 | 0 |
| 22 | Davanagere Dist. | 0 | 0 | 0 | 1 | 0 | 14000 | 3 | 0 | 55000 |
| 23 | Chitradurga Dist. | 3 | 3 | 5500 | 2 | 2 | 27600 | 2 | 2 | 0 |
| 24 | Shimoga Dist. | 2 | 1 | 28500 | 4 | 0 | 27000 | 12 | 11 | 135800 |
| 25 | Haveri Dist. | 0 | 0 | 0 | 0 | 0 | 0 | 0 | 0 | 0 |
| 26 | Belgaum Dist. | 0 | 0 | 0 | 0 | 0 | 0 | 0 | 0 | 0 |
| 27 | Dharwad Dist. | 0 | 0 | 0 | 1 | 0 | 3000 | 1 | 0 | 0 |
| 28 | Vijayapura Dist. | 0 | 0 | 0 | 0 | 0 | 0 | 0 | 0 | 0 |
| 29 | Bagalkot Dist. | 0 | 0 | 0 | 0 | 0 | 0 | 0 | 0 | 0 |
| 30 | Gadag Dist. | 4 | 0 | 38000 | 0 | 0 | 0 | 3 | 0 | 58000 |
| 31 | Bidar Dist. | 0 | 0 | 0 | 0 | 0 | 0 | 0 | 0 | 0 |
| 32 | Gulbarga Dist. | 0 | 0 | 0 | 0 | 0 | 0 | 0 | 0 | 0 |
| 33 | Yadgir Dist. | 0 | 0 | 0 | 0 | 0 | 0 | 3 | 3 | 10700 |
| 34 | Raichur Dist. | 0 | 0 | 0 | 0 | 0 | 0 | 2 | 3 | 0 |
| 35 | Koppal Dist. | 0 | 0 | 0 | 6 | 0 | 4250 | 5 | 4 | 40600 |
| 36 | Bellary Dist. | 0 | 0 | 0 | 3 | 0 | 15000 | 0 | 0 | |
| 37 | Vijayanagar Dist. | 0 | 0 | 0 | 0 | 0 | 0 | 0 | 0 | 0 |
| | Total | 309 | 99 | 2771300 | 699 | 173 | 5225500 | 797 | 242 | 9770800 |